ದ್ವಾರಗಳಿವೆ. ದ್ವಾರಗಳ ಸಂದಿನಲ್ಲಿರುವ ಮೆಟ್ಟಿಲುಗಳು ಆಕರ್ಷಕವಾಗಿದ್ದು, ಮಳೆಗಾಲದಲ್ಲಿ ಆ ಮೆಟ್ಟಿಲುಗಳ ಸುತ್ತ ಪಾಚಿ, ಹುಲ್ಲು ಕಟ್ಟುವುದನ್ನು ನೋಡುವುದೇ ಒಂದು ತಣ್ಣಗಿನ ಅನುಭೂತಿ. ಕೋಟೆಯ ವೀಕ್ಷಣಾ ಗೋಪುರಗಳು, ಕಮಾನುಗಳು, ಕೋಟೆಗೆ ಇನ್ನಷ್ಟು ಹೊಳಪು ನೀಡಿವೆ. ಅತ್ಯಂತ ಕಡಿದಾದ ಎತ್ತರದಲ್ಲಿರುವ ಈ ಕೋಟೆಯ ಕೆಲವು ಭಾಗ ಜೀರ್ಣಾವಸ್ಥೆಯಲ್ಲಿವೆ. ಕೋಟೆಯ ಯಾವ ಭಾಗದಲ್ಲಿ ನಿಂತರೂ ಸುತ್ತಮುತ್ತಲಿನ ಹಳ್ಳಿಗಳು, ಪುಣೆ ನಗರ ಎದ್ದು ಕಾಣುತ್ತದೆ.

ವಿಶಾಲವಾಗಿರುವ ಕೋಟೆಯನ್ನು ಎಷ್ಟು ಸುತ್ತಿದರೂ ಹಸಿರು ನಮ್ಮ ಬೆನ್ನ ಹಿಂದೆಯೇ, ಕಣ್ಣಮುಂದೆಯೇ ಬಂದು ಆವರಿಸಿಕೊಂಡಂತೆ ಭಾಸವಾಗುತ್ತದೆ. ಮಳೆ ಮತ್ತು ಚಳಿಗಾಲದಲ್ಲಿ ಈ ಕೋಟೆ ನೋಡಿದರೆ ಕೋಟೆಯ ಜೊತೆಗೆ ಮಂಜು ಮತ್ತು ಮಳೆಯ ತರಹೇವಾರಿ ಚಿತ್ರಕಾವ್ಯಗಳೂ ಎದೆಯಲ್ಲಿ ಶಾಶ್ವತವಾಗಿ ಉಳಿದುಬಿಡುತ್ತವೆ. ಕೆಲವೊಮ್ಮೆ ಇದು ಹಸಿರ ಹುಲ್ಲಿನ ಕೋಟೆಯೋ? ಮಂಜಿನ ಕೋಟೆಯೋ? ಎಂದನ್ನಿಸುತ್ತದೆ. ಈ ಹುಲ್ಲು, ಮಂಜು ಸಾಲುವುದಿಲ್ಲ, ಕಡಿದಾದ ಕಂಡಬಂಡೆಗಳನ್ನು ಏರಿ, ಅಪಾಯಕಾರಿ ದಾರಿಗಳನ್ನು ಬಳಸಿ ಮಂಜಿನ ಕೋಟೆಯಲ್ಲಿ ಕರಗಿ ಚಾರಣ ಮಾಡಿಕೊಂಡೇ ಬರಬೇಕು ಎನ್ನುವ ಚಾರಣಿಗರು, ಗೈಡ್‌ಗಳ ಸಹಾಯ ಪಡೆದು ಚಾರಣ ಮಾಡಿ ಸಿಂಹಗಢ ತಲುಪುತ್ತಾರೆ.

ನಮಗೆ ಕೊಂಚ ಹಸುರು ಸಿಕ್ಕರೂ ಸಾಕು, ಮೆಟ್ಟಿಲು ಹತ್ತುವ ಖುಷಿ ಇದ್ದರೂ ಸಾಕು, ಅದೇ ಸ್ವರ್ಗ ಎನ್ನುವವರು, ವಾಹನ ಮಾಡಿಕೊಂಡೋ, ಸ್ವಂತ ವಾಹನದಲ್ಲೋ ಕೋಟೆಯ ಮುಖ್ಯದ್ವಾರ ತಲುಪಿ, ಅಲ್ಲಿಂದ ಮೆಟ್ಟಿಲುಗಳನ್ನು ಹತ್ತಿ ಸರಸರನೇ ಕೋಟೆ ಏರುತ್ತಾರೆ. ಹಾಗೆ ಕೋಟೆ ಏರುವಾಗ ಆ ಊರಿನ ಹಳ್ಳಿಯವರು ನಿರ್ಮಿಸಿದ ಪುಟ್ಟ



ಕೋಟೆಯಲ್ಲಿರುವ ಪುಟ್ಟ ಕೆರೆ

ಪುಟ್ಟ ಡೇರೆಗಳಲ್ಲಿ ಮರಾಠ ಶೈಲಿಯ ಜೋಳದ ಬಾಕ್ರಿ, ಜುಣಕ, ಪರಾಟ, ಗಡಿಗೆ ಮೊಸರು, ಅನ್ನ, ಮಿಸಳ್ ಪಾವ್ ಮೊದಲಾದವುಗಳನ್ನು ಖರೀದಿಸಿ ತಿಂದು ತೇಗಬಹುದು. ಉದ್ದಕ್ಕೂ ಸಿಗುವ ಬಿಸಿಬಿಸಿ ಕಡಲೆಕಾಯಿ, ಜೋಳ, ಸೌತೆಕಾಯಿ, ಬಗೆ ಬಗೆಯ ಧಾನ್ಯಗಳಿಗೆ, ಕಾಡುಹಣ್ಣುಗಳಿಗೆ, ಒಂಚೂರು ಉಪ್ಪು, ಖಾರ, ಮಸಾಲ ಬೆರೆಸಿ ಓರಣವಾಗಿ ಇಟ್ಟಿದ್ದನ್ನು ಸ್ವಾಹ ಮಾಡಬಹುದು; ಮಲಾಯಿ ಕುಲ್ಫಿ, ಬೆಲ್ಲದ ಕುಲ್ಫಿ, ಲಸ್ಸಿಯ ಥಂಡಿಯಲ್ಲಿ ಕರಗಿಹೋಗಿಬಿಡಬಹುದು.

ಸಣ್ಣಗೆ ಮೋಡ ಆವರಿಸಿ ಮಳೆ ಜಿನುಗಿ ನಿಂತರೆ ಹಿಂಡುಹಿಂಡಾಗಿ ಬಂದು ಇಡೀ ಕೋಟೆ ಆವರಿಸಿಬಿಡುವ ಮಂಜು, ಕೋಟೆಯ ಅಸ್ತಿತ್ವವನ್ನೇ ಕ್ಷಣಕಾಲ ಮರೆಸಿಬಿಡುತ್ತದೆ. ಮತ್ತೆ ಕ್ಷಣಾರ್ಧದಲ್ಲಿಯೇ ಮಂಜು ಆವಿಯಾಗಿ, ಕಣ್ಣೆದುರು ಧುತ್ತೆಂದು ಹುಟ್ಟಿಕೊಂಡಂತೆ ಕಾಣುವ ಸಿಂಹಗಢ ಕೋಟೆ ನೋಡುತ್ತಿದ್ದಂತೆ ಅಬ್ಬಾ ಎಂದು ಉದ್ಗಾರ ಬರದೇ ಇರದು.

ನಾವು ಕೋಟೆಯನ್ನೂ, ಕೋಟೆಯ ಐತಿಹಾಸಿಕ ಪರಿಮಳವನ್ನೂ ನಮ್ಮೊಳಗೆ ತುಂಬಿಕೊಂಡು ಹೊರಟಾಗ ಸಂಜೆಯಾಗಿತ್ತು. ಬಾನಲ್ಲಿ ಕಪ್ಪು ಮೋಡಕಟ್ಟಿ ಮೊದಲೇ ಕಪ್ಪಗಿದ್ದ ಕೋಟೆ ಈಗ ಮತ್ತೂ ಕರ್ರಗೆ ಕಾಣತೊಡಗಿತು. ಕೋಟೆಯ ಮೆಟ್ಟಿಲುಗಳನ್ನು ಇಳಿಯುವಷ್ಟರಲ್ಲಿ ಮಳೆ ಸಣ್ಣಗೆ ಜಿನುಗತೊಡಗಿತು. ಮಳೆಗೆ ಒದ್ದೆಯಾದ ಕೋಟೆ ಇನ್ನಷ್ಟು ಮನೋಹರವಾಗಿ ಕಂಡಿತು. ತನ್ನೊಡಲಲ್ಲಿರುವ ಐತಿಹಾಸಿಕ ಕಥೆಗಳನ್ನು ಮಳೆ ಹನಿಗಳಿಗೆ ಕೋಟೆ ಗುಟ್ಟಾಗಿ ಹೇಳುವಂತೆ ಕಾಣುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in

